## ಆನೆಗಳಿಗಾಗಿ ಕಲ್ಲುಬಾಳೆ

‘ಆನೆಗಳಿಗಾಗಿ ಕಲ್ಲುಬಾಳೆ’, ಸಹನಾ ಕಾಂತಬೈಲು ಅವರ ಸ್ವಸಾಧನೆಯ ಅನುಭವಕಥನ (15 ಜುಲೈ) ಕಾಡಿನ ನಡುವಿನ ಕೃಷಿ ಬದುಕಿನ ಚಿತ್ರಣವೂ ಆಗಿತ್ತು. ಅವರ ಸಹನೆ, ಚಿಂತನೆ, ಕಾಳಜಿ, ಕ್ರಿಯಾಶೀಲತೆಗಳಿಗೆ ನಮ್ಮ ಹೃದಯ ತುಂಬಿಬಂದಿದೆ. ಕಲ್ಲುಬಾಳೆ ಗಿಡದ ವಿಶೇಷತೆಯೂ ನಮಗೆ ತಿಳಿಯಿತು. ಈ ಮಾದರಿ ಸರ್ವತ್ರ ಜಾರಿಯಾದರೆ, ಅದರಲ್ಲೂ ಅರಣ್ಯ ಇಲಾಖೆ ಮುತುವರ್ಜಿ ವಹಿಸಿದರೆ ಆನೆಗಳ ದಾಳಿಗಳನ್ನುತಪ್ಪಿಸಬಹುದು.

—ರಮೇಶ್ ರಾವ್, ಕೈಕಂಬ



ಆನೆಗಳಿಂದ ರಕ್ಷಣೆಗಾಗಿ ಈ ಕಲ್ಲುಬಾಳೆಯನ್ನು ಕಷ್ಟಪಟ್ಟು ಬೆಳೆಸುವುದರ ಜೊತೆಗೆ ಆನೆಯ ಹೊಟ್ಟೆಯನ್ನು ಸಹ ತುಂಬಿಸಿದ ದಂಪತಿಗಳ ಕೆಲಸ ಶ್ಲಾಘನೀಯ.

—ಬೆಂ.ಮು. ಮಾರುತಿ, ಬೆಂಗಳೂರು

ಆನೆಗಳಿಗಾಗಿ ಕಲ್ಲು ಬಾಳೆಯನ್ನು ಯಾರ ಸಹಾಯವಿಲ್ಲದೆ, ಪ್ರಾಣಾಪಾಯ ಲೆಕ್ಕಿಸದೆ, ಬೆಳೆಸಿದ ಸಹನಾ ಅವರ ಸಾಹಸಕ್ಕೆ, ಎಂಥವರೂ ತಲೆ ಬಾಗಬೇಕು. ಪ್ರಕೃತಿ ಧ್ವಂಸ ಮಾಡುತ್ತಿರುವ ಈ ಕಾಲದಲ್ಲಿ, ಲೇಖಕಿಗೆ ನನ್ನ ಸಾಷ್ಟಾಂಗ ನಮನ.

—ರಜನಿ ರಾಮನಾಥ

ಕಲ್ಲು ಬಾಳೆ ಆನೆಗೆ ಅಷ್ಟೊಂದು ಪ್ರಿಯ ಎಂದು ನನಗೆ ಗೊತ್ತಾದುದು ಲೇಖನ ಓದಿಯೇ! ಚಾರ್ಮಾಡಿ ಘಾಟಿ ಹಾದು ಹೋಗುವಾಗ ಬದಿಯ ಗುಡ್ಡದ ಉದ್ದಗಲಕ್ಕೂ ಇದು ಹುಲುಸಾಗಿ ಬೆಳೆದಿರುವುದನ್ನು ನಾವು ನೋಡಬಹುದು.

—ವಾಸುದೇವ ಭಟ್, ಬುಡ್ನಾರುಡುಪಿ

## ಮನಮಿಡಿಯುವ ಚಿತ್ರಗಳು

ನಮ್ಮ ‘ಸುಧಾ’ದಲ್ಲಿ ಮೊದಲ ಹಾಗೂ ಕೊನೆಯ ಒಳಗಿನ ರಕ್ಷಾಪುಟದಲ್ಲಿ ಪ್ರತಿ ವಾರ ಛಾಯಾಚಿತ್ರ ಪ್ರಕಟವಾಗುತ್ತಿವೆ. ಜುಲೈ 8ರ ಸಂಚಿಕೆಯ ಎರಡನೇ ರಕ್ಷಾಪುಟದಲ್ಲಿ ಮಕ್ಕಳ ಉಲುಮೆಯ ಮನ ಮಿಡಿಯುವ ಚಿತ್ರವಿದ್ದರೆ, ಮತ್ತೊಂದು ರಕ್ಷಾಪುಟದಲ್ಲಿ ಮಳೆ ನೀರಿನಲ್ಲಿ ಉಲ್ಲಾಸದಿಂದ ಆಟ ಆಡುತ್ತಿರುವ ಮಕ್ಕಳ ಸುಂದರವಾದ ಚಿತ್ರವಿತ್ತು. ಹಾಗೆಯೇ ಜುಲೈ 15ರ ಸಂಚಿಕೆಯಲ್ಲಿ ಮೊದಲ ಪುಟದಲ್ಲಿ ನವಿಲಮ್ಮನ ಸಂಸಾರ ಮುದ್ದಾಗಿತ್ತು ಹಾಗೂ ಚೀನಾದ ಕಮ್ಯುನಿಸ್ಟ್ ಪಕ್ಷದ ನೂರರ ಸಂಭ್ರಮದ ಚಿತ್ರದಲ್ಲಿನ ಗಗನ ಚುಂಬಿ ಕಟ್ಟಡಗಳು, ವಿಶಾಲವಾದ ನೀಲಾಕಾಶದ ನಡು ನಡುವೆ ಮೋಡಗಳು ಮತ್ತು ಲೋಹದ ಹಕ್ಕಿಗಳು ಚಿತ್ತಾಕರ್ಷಕವಾಗಿದ್ದವು.

—ವೀಣಾ ಮಂಜಪ್ಪ, ಬೆಂಗಳೂರು

## ಸುಂದರ ಕಥೆ ‘ಸಾಲೂ’



ಅಕ್ಷತಾ ಕೃಷ್ಣಮೂರ್ತಿ ಅವರ ‘ಸಾಲೂ’ (ಜು.15) ಕಥೆ ಇಷ್ಟವಾಯಿತು. ಸಾಲೂ ಅಂತಹ ಎಷ್ಟೋ ಹೆಣ್ಣುಮಕ್ಕಳು ಈಗಲೂ ನಮ್ಮ ಹಳ್ಳಿಗಳಲ್ಲಿ ಕಷ್ಟಪಡುತ್ತಿದ್ದಾರೆ, ಹೋರಾಡುತ್ತಿದ್ದಾರೆ. ವಿದ್ಯೆ ಧೈರ್ಯ ಎಲ್ಲರಲ್ಲೂ ಸ್ಥೈರ್ಯ ತುಂಬುತ್ತದೆ. ಮುಂದೆ ಸಾಲೂ ಏನಾದಳು? ಕಥೆ ಮುಂದುವರಿಸಿ.

—ಶಿವಮ್ಮ, ಬೆಂಗಳೂರು

‘ಸಾಲೂ’ ಓದುತ್ತಿರುವಾಗ ವೇದನೆ ಉಂಟಾಯಿತು. ಮದುವೆ ಆದಾಗಿನಿಂದ ಮನೆಯಲ್ಲಿ ಅತ್ತೆಗಂಡನ ಜೊತೆ ಒಂದಲ್ಲ ಒಂದು ರೀತಿ ಹಿಂಸೆ ಅನುಭವಿಸಿದ ಸಾಲೂ ತನ್ನ ಕಾಲ ಮೇಲೆ ತಾನು ನಿಂತುಕೊಳ್ಳಲು ಪಟ್ಟ ಪರಿಶ್ರಮ ಮೆಚ್ಚುವಂತಹದ್ದು.

—ಎಸ್.ಎಸ್. ಚಂದ್ರಶೇಖರ್, ಬೆಂಗಳೂರು

## ಸಿಹಿಯಾದ ಜೇನುಕೃಷಿ

ಫಾಲ್ಗುಣ ಗೌಡ ಅಚವೆ ಅವರ (ಜು. 15) ‘ಗಣೇಶನ ಬದುಕಿಗೆ ಸಿಹಿಯಾದ ಜೇನು ಕೃಷಿ’ ಲೇಖನ ತುಂಬಾ ಚೆನ್ನಾಗಿತ್ತು. ಮಾಹಿತಿಪೂರ್ಣವಾಗಿತ್ತು.

—ರಶ್ಮಿ ನೆಲ್ಲಿ

ಗಣೇಶರ ಸಾಧನೆ ಹೆಮ್ಮೆಯ ಸಂಗತಿ. ಸಾಧನೆ ಮಾಡಿದ ಹುಡುಗರಿಗೆ ನನ್ನ ವಂದನೆಗಳು.

—ಮಂಜುನಾಥ ಎಸ್ ಓಲೇಕರ್, ಶಿವಮೊಗ್ಗ

## ಜನಸಂಖ್ಯೆಯ ಹೊಸ ಟ್ರೆಂಡ್‌ಗಳು

ಗುರುರಾಜ್. ಎಸ್.ದಾವಣಗೆರೆರವರ ‘ವಿಶ್ವ ಜನಸಂಖ್ಯೆಯ ಹೊಸ ಟ್ರೆಂಡ್‌ಗಳು!’ (ಜುಲೈ 15) ಸಂದರ್ಭೋಚಿತ ಹಾಗು ಔಚಿತ್ಯಪೂರ್ಣ ಲೇಖನ. ಜನಸಂಖ್ಯೆ ನಿಯಂತ್ರಣಕ್ಕೆ ಭಾರತ ಸರ್ಕಾರ ಹರಸಾಹಸಪಟ್ಟಿದೆ. TFR ರೇಟ್ ಏನೆಂದು ತಿಳಿದು ಸಂತಸವಾಯಿತು.

—ಸುಪ್ರಜ್ ಎಲ್. ಬರಗೂರು

## ಮನಕಲಕಿದ ಕಥೆ

ವಸುಂಧರಾ ಕದಲೂರು ಅವರ ಕಥೆ ‘ವಿಮಲತ್ತೆ’ (ಜು. 8) ಮನ ಕಲಕಿತು. ವಿಮಲತ್ತೆ ಈ ಕಥೆಯಲ್ಲಿ ಅಮೂರ್ತವಾಗಿ ಕಾಣಿಸಿಕೊಂಡು ಪಾತ್ರವಾಗದೆ ತನ್ನ ಅಪೂರ್ವ ವ್ಯಕ್ತಿತ್ವದಿಂದ ತುಂಬಾ ಎತ್ತರಕ್ಕೆ ಬೆಳೆದು ನಿಂತವಳಂತೆ ಕಂಗೊಳಿಸಿದಳು. ಅನುಪಮ ಚೆಲುವೆಯಾಗಿಯೇ ನಮ್ಮ ಮನಸ್ಸಿನಲ್ಲಿ ಉಳಿದುಬಿಟ್ಟಳು.

—ವೈ.ಬಿ.ಎಚ್. ಜಯದೇವ್, ಬೆಂಗಳೂರು

### ಮುದ್ದಣ ಪ್ರಶಸ್ತಿಗೆ ಆಹ್ವಾನ

ಕಾಂತಾವರ ಕನ್ನಡಸಂಘವು 2021ರ ಸಾಲಿನ ಮುದ್ದಣ ಕಾವ್ಯಪ್ರಶಸ್ತಿಗೆ ಕವನಸಂಗ್ರಹದ ಹಸ್ತಪ್ರತಿಗಳನ್ನು ಆಹ್ವಾನಿಸಿದೆ. ಪ್ರಶಸ್ತಿಯು ₹ 10,000 ನಗದು, ಪ್ರಶಸ್ತಿ ಪತ್ರ ಒಳಗೊಂಡಿದೆ. ಹಸ್ತಪ್ರತಿ ಕಳಿಸಲು ಕೊನೇ ದಿನಾಂಕ: ಸೆಪ್ಟೆಂಬರ್ 15. ಮಾಹಿತಿಗೆ: kannadasanghakanthavara@gmail.com ಅಥವಾ ದೂರವಾಣಿ: 9900701666 / 9008978366

### ಮಾಸ್ತಿ ಪುರಸ್ಕಾರ

ಡಾ. ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಟ್ರಸ್ಟ್, ‘ಮಾಸ್ತಿ ಕಥಾ ಪುರಸ್ಕಾರ’ ಹಾಗೂ ‘ಮಾಸ್ತಿ ಕಾದಂಬರಿ ಪುರಸ್ಕಾರ’ಕ್ಕೆ ಕಥಾಸಂಕಲನ ಹಾಗೂ ಕಾದಂಬರಿಗಳನ್ನು ಆಹ್ವಾನಿಸಿದೆ. 2020 ಜ. 1ರಿಂದ ಡಿ. 31ರ ಅವಧಿಯಲ್ಲಿ ಪ್ರಕಟಗೊಂಡ ಕೃತಿಗಳನ್ನು ಸ್ಪರ್ಧೆಗೆ ಪರಿಗಣಿಸಲಾಗುತ್ತದೆ. ಪುರಸ್ಕೃತ ಲೇಖಕರಿಗೆ ತಲಾ ₹ 25 ಸಾವಿರ ನಗದು ಮತ್ತು ಪ್ರಕಾಶಕರಿಗೆ ₹ 10 ಸಾವಿರ ನಗದು, ಫಲಕ ನೀಡಲಾಗುತ್ತದೆ. ಆಸಕ್ತರು ನಾಲ್ಕು ಪ್ರತಿಗಳನ್ನು ಆಗಸ್ಟ್ 16ರೊಳಗೆ ಕಳಿಸಬೇಕು. ವಿಳಾಸ: ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಟ್ರಸ್ಟ್, ನಂ. 21, ಎಲ್ಲಪ್ಪ ಗಾರ್ಡನ್, 10ನೇ ಕ್ರಾಸ್, ಮಲ್ಲೇಶ್ವರ, ಬೆಂಗಳೂರು–56003. ಮಾಹಿತಿಗೆ: 080 23363347

### ತಿದ್ದುಪಡಿ

‘ಜನಸಂಖ್ಯೆ: ಬದಲಾಯಿತೆ ಸಮೀಕರಣ?’ ಲೇಖನದಲ್ಲಿನ (ಜು.15) ಅಂಕಿಅಂಶ ಪಟ್ಟಿಯಲ್ಲಿ ಹಿಮಾಚಲ ಪ್ರದೇಶ ರಾಜ್ಯದ ಮಹಿಳಾ ಸಾಕ್ಷರತಾ ಪ್ರಮಾಣ 15.7 ಎಂದು ತಪ್ಪಾಗಿ ಪ್ರಕಟವಾಗಿದೆ. ಸರಿಯಾದ ಪ್ರಮಾಣ 88.2.

—ಸಂಪಾದಕ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in